ಕಲಾವಿದ ಸೀನು, ಚಿತ್ರದುರ್ಗ
*ಒಂದು ಹುಡುಗಿಯ ಮುಗುಳ್ನಗೆ ಒಬ್ಬ ಹುಡುಗನ ಜೀವನಶೈಲಿಯನ್ನೇ ಚೇಂಜ್ ಮಾಡುತ್ತದೆ ಅಲ್ವಾ...?*



ನಿಜ. ಅಲ್ಲಿಯವರೆಗೆ ನರನಾಗಿದ್ದವನು ಆಗಿನಿಂದ ವಾನರನಾಗುತ್ತಾನೆ!

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು
*ಕನಸುಗಳಿಲ್ಲದ ಜೀವನ...?*
ಇಂಧನವಿಲ್ಲದ ವಿಮಾನ!

ಕೊ.ಸು.ನರಸಿಂಹಮೂರ್ತಿ, ಚಾಮರಾಜಪುರಂ
*ಹಿಂದೆಲ್ಲಾ ನೀ ಮುಡಿದಾ ಮಲ್ಲಿಗೆ ಹೂವಿನ ಮಾಲೆ ಎಂದು ಪ್ರೇಮಗೀತೆ ಇರುತ್ತಿತ್ತು. ಈಗ?*
ನೀ ತೊಡುವಾ ಜೀನ್ಸಿನ ಟಾಪಿನ ಮೇಲೆ ನನಗೆಂದೇ ಬರೆದ ಪ್ರೇಮದ ಸಾಲೇ....!

ಯಂ.ಸಿ.ಕೃಷ್ಣಪ್ರಸಾದ್, ರಾಜಾಜಿನಗರ
*ನಮ್ಮ ಪೂರ್ವಿಕರು ಪುರಾಣಗಳನ್ನು ಬರೆಯುವ ಬದಲು ತಂತ್ರಜ್ಞಾನ ಬೆಳೆಸಿದ್ದರೆ...?*
ಸುಮ್ಮನಿರಿ, ಪುರಾಣ ಆಗ ಬರೆದದ್ದೇ ಸರಿಯಾಯಿತು; ಈಗ ಬರೆದಿದ್ದರೆ ನಿತ್ಯಾನಂದ ಪುರಾಣ, ಎಡ್ಡಿ ಪುರಾಣ, ರೆಡ್ಡಿ ಪುರಾಣ, ಲೆವಿನ್ಸ್ಕಿ ಪುರಾಣ, ಲ್ಯಾಡನ್ ಪುರಾಣ ಇತ್ಯಾದಿಗಳನ್ನು ಬರೆಯಬೇಕಾಗುತ್ತಿತ್ತು!

ಡಿ.ಎಲ್. ಶ್ವೇತಾ, ಚನ್ನಗಿರಿ
*ಯಮರಾಜನಿಗೂ, ಚಿತ್ರರಂಗಕ್ಕೇನು ನಂಟು?*
ಚಿತ್ರಹಿಂಸೆ!

ಎಂ.ಎನ್. ಸೋಮಶೇಖರ್, ಮೈಸೂರು
*ಮಾನವನಿಗೆ ಹನುಮಂತನಿಗಿದ್ದಂತೆ ಬಾಲವಿದ್ದಿದ್ದರೆ...?*



ಏರ್‌ಪೋರ್ಟ್, ರೈಲ್ವೇ ಸ್ಟೇಷನ್‌ಗಳಲ್ಲಿ ಲಗ್ಗೇಜ್ ಹೊರುವ ಬದಲು ಬಾಲಕ್ಕೆ ಸಿಕ್ಕಿಸಿಕೊಂಡು ಎಳೆದುಕೊಂಡು ಹೋಗಬಹುದಿತ್ತು!

ಬಿ. ಚಂದ್ರೇಗೌಡ, ಬೆಂಗಳೂರು
*ಅಡ್ಡಗೋಡೆ ಮೇಲೆ ದೀಪ ಇಡೋದು ಎಂದರೇನು?*
ಎರಡೆರಡು ದೀಪ ಉರಿಸುವಷ್ಟು ಸೀಮೆಎಣ್ಣೆ ಇಲ್ಲಾಂತ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ವದಂತಿ ಹಾಗೂ ಗುಲ್ಲು ಇವುಗಳ ವ್ಯತ್ಯಾಸವೇನು ಸಾರ್?*
ಒಂದನ್ನು ಹರಡುತ್ತಾರೆ, ಇನ್ನೊಂದನ್ನು ಎಬ್ಬಿಸುತ್ತಾರೆ!

ಎಂ.ಆರ್.ಪವನ್ ಕುಮಾರ್, ಬಳ್ಳಾರಿ
*ನಿಮಗೆ ಕನ್ನಡದ ಕೋಟ್ಯಧಿಪತಿ ಬಿರುದನ್ನು ನಾವು ಯಾವಾಗ ಕೊಡಬಹುದು?*
ಕನ್ನಡಕ, ಕೋಟ್‌ನ ಅಧಿಪತಿ ಎಂದಂತೂ ಶೀಘ್ರವೇ ಕೊಡಬಹುದು!

ಪಿ.ಜೆ. ರಾಘವೇಂದ್ರ, ಮೈಸೂರು
*ಹೊಕ್ಕಳು ತೋರಿಸುತ್ತಿದ್ದ ನಾಯಕಿಯರೀಗ ಬೆನ್ನು ತೋರಿಸುತ್ತಿರುವುದೇಕೆ ರಾಮ್?*
ಹಾಗಾದರೂ ನಿರ್ಮಾಪಕರು ಅವರ ಬೆನ್ನು ಹತ್ತಲೆಂದು!

ಎನ್.ಎಸ್. ಆನಂದ್, ಕತ್ರಗುಪ್ಪ
*ಕಾಶಿಯಲ್ಲಿ ಪ್ರಿಯವಾದ ವಸ್ತುವನ್ನು ಬಿಟ್ಟು ಬಾ ಎಂದರೆ ತನ್ನ ಪತ್ನಿಯನ್ನೇ ಬಿಟ್ಟು ಬಂದಿದ್ದಾನಲ್ಲಾ...?*
ಅದಾಯಿತಲ್ಲಾ... ಪ್ರಯಾಗಕ್ಕೆ ಬರುವ ವೇಳೆಗೆ ಅವಳು ಅಲ್ಲೇ ಹಾಜರಾಗಿ ಇವನಿಗೆ ಸರಿಯಾಗಿ ಶ್ರಾದ್ಧ ಮಾಡಿದಳಂತೆ!

ತುರಗಲ್ಲ ಉಮೇಶ, ರಾಮದುರ್ಗ
*ನಾನು ಮದುವೆಯಾಗಿ ತಪ್ಪು ಮಾಡಿದೆ; ಪರಿಹಾರವೇನು?*
ತೆಪ್ಪಗೆ ಅನುಭವಿಸಿಬಿಡಿ, ಇಲ್ಲವಾದರೆ ಪರಿಹಾರವನ್ನೂ ನೀವೇ ತೆರಬೇಕಾಗುತ್ತದೆ!

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ
*ಇಲ್ಲೊಬ್ಬರು ಉನ್ನತ ಸಚಿವ ಸ್ಥಾನದಲ್ಲಿದ್ದರೂ ಕುಡುಕನ ಮಾದರಿಯಲ್ಲಿ ವರ್ತಿಸುತ್ತಾರಲ್ಲಾ, ಯಾಕೆ ಗುರುಗಳೆ?*
ಸಹಜವೇ... ಅಧಿಕಾರ ದೇವನ ಹೆಂಡ, ಅದರ ಕಿಕ್ ಕಳ್ಳಭಟ್ಟಿಗಿಂತಲೂ ಬಹಳ ಜೋರು!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಶಿಲಾಯುಗ ಮತ್ತೆ ಮರುಕಳಿಸುವಂತಾದರೆ?*
ಟ್ರಾಫಿಕ್ ಜ್ಯಾಮ್‌ನಲ್ಲಿ ಧೂಳು, ಹೊಗೆ ಕುಡಿಯುವುದು ತಪ್ಪುತ್ತದೆ!

ಸವಿರವಿ, ಬಾಳೇಹೊನ್ನೂರು
*ಇಡೀ ಪ್ರಪಂಚದಲ್ಲಿರುವ ಕ್ರಿಮಿ ಕೀಟಗಳು ಮನುಷ್ಯನ ಕಣ್ಣಿಗೆ ಕಾಣುವಂತಿದ್ದರೆ?*
ಮೈಕ್ರೋಸ್ಕೋಪ್‌ಗಳು ಮಾರಾಟವಾಗದೆ ತುಕ್ಕು ಹಿಡಿಯುತ್ತಿದ್ದವು!

## ಬಹುಮಾನಿತ ಪ್ರಶ್ನೆ

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಹುಡುಗಿಯರಿಗೆಂದೇ ವೈವಿಧ್ಯಮಯ ಡ್ರೆಸ್‌ಗಳಿರುವಾಗ ಅವರೇಕೆ ಹುಡುಗರಂತೆ ಟೀ ಶರ್ಟ್, ಜೀನ್ಸ್ ಪ್ಯಾಂಟ್ ಧರಿಸುತ್ತಾರೆ?*
ಮೈ ಕಾಣದಂತೆ, ಮೈಮಾಟ ಕಾಣುವಂತೆ ಧರಿಸಲು ಇದೇ ಸಭ್ಯ ಉಡುಗೆಯಂತೆ!

ಬಸವಣ್ಣ ಹೊಸಖಾಂಡೆ, ಬಸವನಬಾಗೇವಾಡಿ
*ನನ್ನ ಶರ್ಟು ಬರುಬರುತ್ತಾ ದೊಡ್ಡದಾಗುತ್ತಿದೆ. ಇದು ಸಿಂಪಿಗನ ಕಲಾಕೌಶಲ್ಯವೋ, ಅರಿವೆಯ ಗುಣಧರ್ಮವೋ?*
ಹೆಂಡತಿ ಇರುವಾಗ ಲವ್ವೂಂತ ಹೋಗ್ಬೇಡೀಂದ್ರೆ ಕೇಳ್ಲಿಲ್ಲ; ಅವಳದೇ ಚಿಂತೆ, ಸಣ್ಣಗಾಗಿದ್ದೀರಿ, ಶರ್ಟ್ ಲೂಸು!

ಡಿ.ಎಲ್. ಸುರೇಶ್, ಚನ್ನಗಿರಿ
*ಶಿಕ್ಷಣದ ಮೂಲ ಉದ್ದೇಶವೇನು?*
ಪ್ರತಿ ಕ್ಷಣದ ಮೌಲ್ಯ ಹೆಚ್ಚಿಸುವುದು!

ಕೆ.ಶಾರದಾ ಭಟ್, ಉಡುಪಿ
*ಮಾಡಿದ ಪ್ರತಿಜ್ಞೆ, ಕೊಟ್ಟ ಮಾತು ತಪ್ಪಬಾರದೆಂಬ ರಾಮಾಯಣದ ನೀತಿಯನ್ನು ಮರೆತ ರಾಜಕಾರಣಿಗಳಿಗೆ ರಾಮಾಯಣದ ಪಾಠ ಮಾಡೋಣವೆ ಗುರುಗಳೆ?*



ಪ್ರಯೋಜನವಿಲ್ಲ; ರಾಮಾಯಣದಲ್ಲಿ ಅವರ ಮನಸ್ಸಿಗೆ ಹತ್ತುವುದು ಕುಂಭಕರ್ಣ ಮತ್ತು ಪಕ್ಷಾಂತರಿ ವಿಭೀಷಣ ಮಾತ್ರ!

ಕುಮಾರ ಚಲವಾದಿ, ಹೊಳೆನರಸಿಪುರ
*ಕಟ್ಟಿಕೊಂಡವರಿಗೆ ಕೋಡಗ ಮುದ್ದು ಅಂತಾರಲ್ಲ, ಇದು ಪತ್ನಿಗೋ, ಪತಿಗೋ?*
ಕೋಡಗನ ಕೋಳಿ ನುಂಗಿತ್ತಾ... ಎನ್ನುವರಲ್ಲಾ, ನುಂಗುವ ಕೋಳಿ ಹೆಣ್ಣು, ನುಂಗಿಸಿಕೊಂಡ ಕೋಡಗ ಉರುಫ್ ಪತಿ ಗಂಡು!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ
*ಹಿಂದಿನ ಕಾಲದಲ್ಲಿ ರಾಜರು ಜನರ ಕಷ್ಟಸುಖ ಅರಿಯಲು ರಾತ್ರಿ ದೇಶಸಂಚಾರ ಮಾಡುತ್ತಿದ್ದರಂತೆ; ಈಗಿನ ಮಂತ್ರಿಗಳು?*
ಇವರೂ ಜನರ ಕಷ್ಟಸುಖ ಅರಿಯಲು ಸಂಚಾರ ಮಾಡುತ್ತಾರೆ; ವಿದೇಶ ಸಂಚಾರ!

■ ರಾಮ್